**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 592 |
| ಉತ್ತರಿಸುವ ಸಚಿವರು | : | ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 11.12.2020 |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕೋವಿಡ್-19 ಲಾಕ್ ಡೌನ್ ಸಮಯದಲ್ಲಿ ಕೈಮಗ್ಗ ಮತ್ತು ಜವಳಿ ಕಾರ್ಮಿಕ ಕುಟುಂಬಗಳಿಗೆ ಸರ್ಕಾರದಿಂದ ಸಹಾಯಧನ ಘೋಷಿಸಲಾಗಿದೆಯೇ; | ರಾಜ್ಯದಲ್ಲಿನ ಕೈಮಗ್ಗ ನೇಕಾರಿಕೆ ಹಾಗೂ ಇತರೆ ಕೈಮಗ್ಗ ಚಟುವಟಿಕೆಗಳನ್ನು ನಡೆಸುವ **ಕೈಮಗ್ಗ ನೇಕಾರರಿಗೆ** "ನೇಕಾರ ಸಮ್ಮಾನ್ ಯೋಜನೆ" ಯನ್ನು ಘೋಷಿಸುವ ಮೂಲಕ ಪ್ರತಿ ಕೈಮಗ್ಗ ನೇಕಾರರಿಗೆ ವಾರ್ಷಿಕ ರೂ.2,000/-ಗಳ ಆರ್ಥಿಕ ನೆರವನ್ನು ನೇರ ನಗದು ವರ್ಗಾವಣೆ ಮುಖಾಂತರ ನೀಡಲು ಆದೇಶ ಹೊರಡಿಸಲಾಗಿದೆ. ಸದರಿ ಯೋಜನೆಯಡಿ ಇದುವರೆಗೆ 50,511 ನೇಕಾರರು ಅರ್ಜಿಗಳನ್ನು ನೊಂದಾಯಿಸಿದ್ದು, ಇದುವರೆಗೆ 46,259 ನೇಕಾರರಿಗೆ ರೂ.925.18 ಲಕ್ಷಗಳ ಪರಿಹಾರಧನವನ್ನು ನೇರ ನಗದು ವರ್ಗಾವಣೆ ಮುಖಾಂತರ ವರ್ಗಾಯಿಸಲಾಗಿದೆ.<br><br>"ಕೋವಿಡ್-19 ಪ್ರಯುಕ್ತ ವಿದ್ಯುತ್ ಮಗ್ಗ ನೇಕಾರರಿಗೆ ಆರ್ಥಿಕ ಬೆಂಬಲ ನೀಡುವ" ಸಂಬಂಧ ರಾಜ್ಯದಲ್ಲಿರುವ 1.25 ಲಕ್ಷ **ವಿದ್ಯುತ್ ಚಾಲಿತ ಮಗ್ಗಗಳಲ್ಲಿ ಪ್ರತಿ ವಿದ್ಯುತ್ ಚಾಲಿತ ಮಗ್ಗಗಳಲ್ಲಿ ಕೆಲಸ ಮಾಡುತ್ತಿರುವ ಒಬ್ಬ ಕೂಲಿ ಕಾರ್ಮಿಕರಿಗೆ** ಒಂದು ಬಾರಿಗೆ ಮಾತ್ರ ಅನ್ವಯಿಸುವಂತೆ ರೂ.2,000/-ಗಳ ಪರಿಹಾರಧನವನ್ನು ನೇರ ನಗದು ವರ್ಗಾವಣೆ ಮುಖಾಂತರ ನೀಡಲು ಆದೇಶವನ್ನು ಹೊರಡಿಸಲಾಗಿದೆ. ಸದರಿ ಯೋಜನೆಯಡಿ ಇದುವರೆಗೆ 56,449 ನೇಕಾರರು ಅರ್ಜಿಗಳನ್ನು ನೊಂದಾಯಿಸಿದ್ದು, ಇದುವರೆಗೆ 48,004 ನೇಕಾರರಿಗೆ ರೂ.960.08 ಲಕ್ಷಗಳ ಪರಿಹಾರಧನವನ್ನು ನೇರ ನಗದು ವರ್ಗಾವಣೆ ಮುಖಾಂತರ ವರ್ಗಾಯಿಸಲಾಗಿರುತ್ತದೆ. |
| (ಆ) | ಹಾಗಿದ್ದಲ್ಲಿ, ರಾಜ್ಯಾದ್ಯಂತ ಇಲ್ಲಿಯವರೆಗೆ ನೀಡಲಾದ ಒಟ್ಟು ಸಹಾಯಧನ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ವಿವರವನ್ನು ಅನುಬಂಧದಲ್ಲಿ ಒದಗಿಸಿದೆ. |

..2

<table>
<tr>
<td>(ಇ)</td>
<td>ಇನ್ನು ಎಷ್ಟು ಕಾರ್ಮಿಕ ಕುಟುಂಬಗಳಿಗೆ ಸಹಾಯಧನ ನೀಡುವುದು ಬಾಕಿ ಇದೆ.</td>
<td>ಸದರಿ ಯೋಜನೆಯಡಿ ಆಧಾರ್ ಸೀಡಿಂಗ್ ಮತ್ತು NPCI Enable ಆಗದ ಕಾರಣಗಳಿಂದಾಗಿ ಒಟ್ಟು 12,697 ನೇಕಾರರಿಗೆ ಪರಿಹಾರಧನ ನೀಡುವುದು ಬಾಕಿ ಇದ್ದು, ವಿವರ ಈ ಕೆಳಕಂಡಂತಿದೆ:-
<table>
<tr><th>ಕ್ರ.ಸಂ.</th><th>ವಿವರ</th><th>ಸಂಖ್ಯೆ</th></tr>
<tr><td>1</td><td>ಕೈಮಗ್ಗ ನೇಕಾರರು</td><td>4,252</td></tr>
<tr><td>2</td><td>ವಿದ್ಯುತ್ ಮಗ್ಗ ಕೂಲಿ ಕಾರ್ಮಿಕರು</td><td>8,445</td></tr>
<tr><td colspan="2">ಒಟ್ಟು</td><td>12,697</td></tr>
</table>
</td>
</tr>
<tr>
<td>(ಈ)</td>
<td>ಈ ಸಹಾಯಧನವನ್ನು ಪಡೆಯಲು ಕಾರ್ಮಿಕರಿಗೆ ಇರುವ ನಿಬಂಧನೆಗಳು ಯಾವುವು? (ಸಂಪೂರ್ಣ ವಿವರ ನೀಡುವುದು)</td>
<td>ಈ ಸಹಾಯಧನವನ್ನು ಪಡೆಯಲು ಕಾರ್ಮಿಕರಿಗೆ ಇರುವ ನಿಬಂಧನೆಗಳು ಕೆಳಕಂಡಂತಿವೆ:-<br><br>
<u>ಕೈಮಗ್ಗ ನೇಕಾರರು</u>
<ul>
<li>ಕೈಮಗ್ಗ ನೇಕಾರರು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.</li>
<li>ಹತ್ತಿ, ಉಣ್ಣೆ, ರೇಷ್ಮೆ ಮತ್ತು ಇತರೆ ಕೈಮಗ್ಗ ಚಟುವಟಿಕೆಗಳಲ್ಲಿ ತೊಡಗಿರಬೇಕು.</li>
<li>ನಾಲ್ಕನೇ ರಾಷ್ಟ್ರೀಯ ಕೈಮಗ್ಗ ಗಣತಿಯ ಪಟ್ಟಿಯಲ್ಲಿ ನೊಂದಾಯಿಸಿರಬೇಕು.</li>
<li>ಕೈಮಗ್ಗ ನೇಕಾರರು ಆಧಾರ ಸಂಖ್ಯೆ ಮತ್ತು ಬ್ಯಾಂಕ್ ಖಾತೆ ಹೊಂದಿರಬೇಕು.</li>
<li>ಕೈಮಗ್ಗ ಗಣತಿಯ ಪಟ್ಟಿಯಲ್ಲಿ ಬಿಟ್ಟು ಹೋಗಿರುವ ಅರ್ಹ ಕೈಮಗ್ಗ ನೇಕಾರರಿದ್ದಲ್ಲಿ, ಪರಿಶೀಲಿಸಿ ಸಹಾಯಧನ ಪಡೆಯಲು ಅವಕಾಶ ಕಲ್ಪಿಸಲಾಗುವುದು ಹಾಗೂ ವರ್ಷವಾರು ನೇಕಾರರ ಪಟ್ಟಿಯನ್ನು ಪರಿಷ್ಕರಿಸುವ ಅಧಿಕಾರವನ್ನು ಕೈಮಗ್ಗ ಮತ್ತು ಜವಳಿ ಇಲಾಖೆ ಹೊಂದಿರುತ್ತದೆ.</li>
</ul>
<u>ವಿದ್ಯುತ್ ಮಗ್ಗ ಕೂಲಿ ಕಾರ್ಮಿಕರು</u>
<ul>
<li>ಫಲಾನುಭವಿಯು ವಿದ್ಯುತ್ ಮಗ್ಗ ಘಟಕದಲ್ಲಿ ಕೂಲಿ ಕಾರ್ಮಿಕನಾಗಿ ಅಥವಾ ಸ್ವತಃ ಕಾರ್ಮಿಕನಾಗಿ ಕೆಲಸ ಮಾಡುತ್ತಿರಬೇಕು.</li>
<li>01 ರಿಂದ 20 ಹೆಚ್.ಪಿ. ವರೆಗೆ ವಿದ್ಯುತ್ ರಿಯಾಯಿತಿ ಯೋಜನೆಯಡಿ ಸೌಲಭ್ಯ ಪಡೆಯುತ್ತಿರುವ ವಿದ್ಯುತ್ ಮಗ್ಗ ಘಟಕಗಳಿಗೆ ಮಾತ್ರ ಅನ್ವಯಿಸುತ್ತದೆ.</li>
</ul>
</td>
</tr>
</table>

ಸಂ: ವಾಕ್ಯ 258 JAKE 2020

(ಶ್ರೀಮಂತ ಬಾಳಾಸಾಹೇಬ ಪಾಟೀಲ್)

ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 592 ಕ್ಕೆ ಅನುಬಂಧ

ನೇರ ನಗದು ವರ್ಗಾವಣೆ(ಡಿ.ಬಿ.ಟಿ) ಮುಖಾಂತರ ಕೈಮಗ್ಗ ಮತ್ತು ವಿದ್ಯುತ್ ಮಗ್ಗ ನೇಕಾರರಿಗೆ ಪರಿಹಾರಧನ ನೀಡಲಾದ ಜಿಲ್ಲಾವಾರು ವಿವರ (ಮೊತ್ತ ರೂ.ಲಕ್ಷಗಳಲ್ಲಿ)

| ಕ್ರ.ಸಂ | ಜಿಲ್ಲೆ | ಕೈಮಗ್ಗ ನೇಕಾರರ ಸಂಖ್ಯೆ | ಡಿ.ಬಿ.ಟಿ ಮಾಡಲಾದ ಮೊತ್ತ | ವಿದ್ಯುತ್‌ಮಗ್ಗ ನೇಕಾರರ ಸಂಖ್ಯೆ | ಡಿ.ಬಿ.ಟಿ ಮಾಡಲಾದ ಮೊತ್ತ |
|---|---|---|---|---|---|
| 1 | ಬೆಂಗಳೂರು (ನ) | 1114 | 22.28 | 7983 | 159.66 |
| 2 | ಬೆಂಗಳೂರು(ಗ್ರಾ) | 150 | 3.00 | 5204 | 104.08 |
| 3 | ಬಾಗಲಕೋಟೆ | 10316 | 206.32 | 10976 | 219.52 |
| 4 | ಬೆಳಗಾವಿ | 4371 | 87.42 | 14498 | 289.96 |
| 5 | ಬಳ್ಳಾರಿ | 1454 | 29.08 | 0 | 0.00 |
| 6 | ಬೀದರ್ | 755 | 15.10 | 0 | 0.00 |
| 7 | ಚಾಮರಾಜನಗರ | 1817 | 36.34 | 0 | 0.00 |
| 8 | ಚಿಕ್ಕಮಗಳೂರು | 118 | 2.36 | 0 | 0.00 |
| 9 | ಚಿಕ್ಕಬಳ್ಳಾಪುರ | 1031 | 20.62 | 790 | 15.80 |
| 10 | ಚಿತ್ರದುರ್ಗ | 4784 | 95.68 | 26 | 0.52 |
| 11 | ದಕ್ಷಿಣ ಕನ್ನಡ | 93 | 1.86 | 0 | 0.00 |
| 12 | ದಾವಣಗೆರೆ | 449 | 8.98 | 53 | 1.06 |
| 13 | ಧಾರವಾಡ | 530 | 10.60 | 237 | 4.74 |
| 14 | ಗದಗ | 2167 | 43.34 | 2076 | 41.52 |
| 15 | ಹಾಸನ | 282 | 5.64 | 92 | 1.84 |
| 16 | ಹಾವೇರಿ | 3752 | 75.04 | 294 | 5.88 |
| 17 | ಕಲಬುರಗಿ | 791 | 15.82 | 50 | 1.00 |
| 18 | ಕೊಡಗು | 50 | 1.00 | 0 | 0.00 |
| 19 | ಕೋಲಾರ | 207 | 4.14 | 176 | 3.52 |
| 20 | ಕೊಪ್ಪಳ | 1357 | 27.14 | 726 | 14.52 |
| 21 | ಮಂಡ್ಯ | 150 | 3.00 | 267 | 5.34 |
| 22 | ಮೈಸೂರು | 372 | 7.44 | 92 | 1.84 |
| 23 | ರಾಯಚೂರು | 40 | 0.80 | 0 | 0.00 |
| 24 | ರಾಮನಗರ | 111 | 2.22 | 993 | 19.86 |
| 25 | ಶಿವಮೊಗ್ಗ | 262 | 5.24 | 0 | 0.00 |
| 26 | ತುಮಕೂರು | 5743 | 114.86 | 2891 | 57.82 |
| 27 | ಉಡುಪಿ | 60 | 1.20 | 0 | 0.00 |
| 28 | ಉತ್ತರ ಕನ್ನಡ | 33 | 0.66 | 11 | 0.22 |
| 29 | ವಿಜಯಪುರ | 1662 | 33.24 | 33 | 0.66 |
| 30 | ಯಾದಗಿರಿ | 494 | 9.88 | 0 | 0.00 |
| ಒಟ್ಟು | | 44515 | 890.30 | 47468 | 949.36 |
| ಎಲ್ಲಾ ಜಿಲ್ಲೆಗಳಿಂದ ಒಳಗೊಂಡಂತೆ ಡಿ.ಬಿ.ಟಿ ಆಗಿರುವ ಸಂಖ್ಯೆ | | 46259 | 925.18 | 48004 | 960.08 |